ಸಸಾರ ಆಗುವುದು ಸ್ವಾಭಾವಿಕವೇ ಇರಬಹುದೇನೋ. ಕಹಿಗುಳಿಗೆ ನುಂಗಿದ ಹಾಗೆ ಇದನ್ನೂ ನುಂಗಬೇಕೇನೋ. ಇನ್ನು ಇವನದ್ದು ಇನ್ನ್ಯಾವ ಕತೆಯೋ? ಒಂದು ಫೋನೂ ಇಲ್ಲದೆ ಯಾಕೆ ಹುಡುಕಿಕೊಂಡು ಬಂದ? ಇರಲಿ, ಗೊತ್ತಾಗುತ್ತಲ್ಲ... ವೆಂಕಪ್ಪಯ್ಯ ಕುತ್ತಿಗೆಯವರೆಗೆ ಶಾಲು ಎಳೆದುಕೊಂಡು ಕಣ್ಮುಚ್ಚಿ ಮಲಗಿದರು.

★★★

ಸಂಜೆ ಐದಕ್ಕೆ 'ಕಾಫಿ ಉಪಚಾರ ಆಯ್ತು' ಅನ್ನುವಷ್ಟರಲ್ಲಿ ಶಿವಶಿವಾ ಅನ್ನುತ್ತಾ ಮಗನ ಸವಾರಿ ಮನೆಗೆ ಬಂತು. ಹತ್ತಿರದ ಪೇಟೆಯ ಹೈಸ್ಕೂಲಿನಲ್ಲಿ ಮೇಷ್ಟ್ರಾಗಿದ್ದಾನೆ. ಕೊರೊನಾ ಮೊದಲ ಅಲೆ ಬಂದು ಹೋಗಿ ಆರ್ಭಟ ಒಂದಿಷ್ಟು ಕಡಿಮೆಯಾಗಿರುವುದರಿಂದ ಶಾಲೆ ಮತ್ತೆ ಆರಂಭವಾಗಿದೆ. ಆದರೂ ಮೈ ಮರೆಯುವಂತಿಲ್ಲ ಎನ್ನುವ ಎಚ್ಚರಿಕೆ ಎಲ್ಲರಿಗೂ ಇದೆ. ಮೆಟ್ಟಿಲ ಕೆಳಗಿದ್ದ ಜೋಡು ನೋಡಿಯೇ ಯಾರೋ ಬಂದಿದ್ದು ಅಂದಾಜಾಗಿ ಮುಖವನ್ನು ಪ್ರಶ್ನಾರ್ಥಕ ಚಿಹ್ನೆ ಮಾಡಿಕೊಂಡು ಮಗ ಒಳಗೆ ಕಾಲಿಟ್ಟ.

"ನನ್ನ ಹಳೇ ಫ್ರೆಂಡು ಕಣೋ. ಶೀನಿ, ಶ್ರೀನಿವಾಸ. ನಿನ್ನ ಮಗಳ ಮದುವೆಗೆ ಬಂದಿದ್ದ..." ಪರಿಚಯ ಹೇಳಿದರು ವೆಂಕಪ್ಪಯ್ಯ.

"ಓ..."

"ಮಧ್ಯಾನ ಬಂದ. ನಿಂಗೆ ಹೇಳಿದೀನೀಂತ ಕಾಣುತ್ತೆ. ಹೈಸ್ಕೂಲಿಂದ ಡಿಗ್ರಿ ಮುಗಿಸೋವರೆಗೆ ಇಬ್ರೂ ಒಟ್ಟಿಗೆ ಓದಿದೋರು. ನಾನು ಹಾಸ್ಟೆಲ್‌ನಲ್ಲಿದ್ದಿದ್ದು ನೆಪಕ್ಕೆ. ಊಟ, ತಿಂಡಿ ಇವರ ಮನೇಲೇ ಅನ್ನುವಷ್ಟು ಋಣ ಹೊರಿಸಿಟ್ಟಿದಾನೆ. ಆಮೇಲೆ ನಾನು ಅಪ್ಪ ಹಾಕಿದ ಆಲದಮರ ಅಂತ ಊರು ಸೇರ್ಕಂಡೆ. ಇವನು ಬ್ಯಾಂಕು ಹುಡುಕ್ಕೊಂಡು ದೊಡ್ಡ ಆಫೀಸರ್ ಆಗಿ ರಿಟೈರ್ ಆಗಿದಾನೆ..." ಬಂದವರು ಪಡಪೋಶಿ ಅಲ್ಲ, ದೊಡ್ಡಮನುಷ್ಯ ಎಂದು ಮಗನಿಗೆ ಮನವರಿಕೆ ಮಾಡಿಕೊಟ್ಟ ಭಾವದಿಂದ ವೆಂಕಪ್ಪಯ್ಯ ನಿರಾಳರಾದರು.

"ಆಯ್ತಾಯ್ತು, ಮಾತಾಡಿ..." ಅನ್ನುತ್ತಾ ಮಗ ಜಗುಲಿ ಹಾದು ಒಳಗೆ ಹೋದ.

"ಮತ್ತೇನಪ್ಪಾ ಸಮಾಚಾರ? ಆರಾಮಿದ್ದಿ ತಾನೇ? ಇರದೇ ಏನು, ಕೈತುಂಬಾ ದುಡಿದು ಗುಡ್ಡೆ ಹಾಕ್ಕೊಂಡಿರ್ತಿ. ಪೆನ್ಷನ್ ಬರ್ತಿರುತ್ತೆ..." ಲೋಕಾಭಿರಾಮಕ್ಕಿಳಿದರು ವೆಂಕಪ್ಪಯ್ಯ. ಮೊಬೈಲ್ ಯುಗ ಬಂದು ಜಮಾನಾ ಕಳೆದಿದ್ದರೂ ವೆಂಕಪ್ಪಯ್ಯ ಅದನ್ನು ತುದಿಬೆರಳಿನಲ್ಲಿ ಸೋಕಿದವರಲ್ಲ. 'ಅದೆಲ್ಲಾ ನಮಗೆ ಬರಲ್ಲಪ್ಪಾ...' ಎಂದು ನಂಬಿಕೊಂಡುಬಿಟ್ಟಿದ್ದರು. ಹಾಗೆ ಫೋನ್ ಇಟ್ಟುಕೊಳ್ಳಬೇಕಾದ ಆವಶ್ಯಕತೆ ಕೂಡಾ ಅವರಿಗೆ ಬಂದಿರಲಿಲ್ಲ. ಎಲ್ಲಾ ವ್ಯವಹಾರಗಳನ್ನೂ ಮಗನೇ ನೋಡಿಕೊಳ್ಳುತ್ತಿದ್ದ. ಪಿತ್ರಾರ್ಜಿತ ಆಸ್ತಿಯ ಜೊತೆ ಸ್ವಯಾರ್ಜಿತವನ್ನೂ ಸೇರಿಸುತ್ತಿರುವ ಮಗನ ಬಗ್ಗೆ ಒಂಥರಾ ಎದೆ ಉಬ್ಬಿ ಬಂದು ಜಂಬ ಬಂದ ಹಾಗೆ ಅನಿಸಿತು.

"ನಿನ್ನ ಮಕ್ಕಳು ಏನ್ಮಾಡ್ತಿದಾರೆ?" ಕೇಳಿದರು ವೆಂಕಪ್ಪಯ್ಯ.

"ಪ್ರಾಣ ಹಿಂಡ್ತಿದಾರೆ..." ಥಟ್ಟಂತ ಬಂತು ಅನಿರೀಕ್ಷಿತ ಉತ್ತರ.

"ಏನೋ? ಏನಂತಿದ್ದಿ?"

"ಸತ್ಯ ಹೇಳ್ತಿದೀನಿ ವೆಂಕಪ್ಪ. ಸೀದಾ ಮೀಡಿಯಾ ಮುಂದೆ ಹೋಗ್ಬೇಕು ಅನ್ನುವಷ್ಟು ಮನಸ್ಸು ರೋಸಿಬಿಟ್ಟಿದೆ..."

"ಆಂ..."

"ಹೌದೋ. ಯಾರೋ ಪೇಪರಿನೋರನ್ನ ಹಿಡಿದು 'ಹೀಗ್ಹೀಗೆ, ಹೀಗ್ಹೀಗೆ...' ಅಂತ ಎಲ್ಲಾ ಟಾಂಟಾಂ ಮಾಡ್ಬೇಕು ಅನ್ನಿಸ್ತಿದೆ..."